2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**129/2013**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವೆಂಕಟೇಶ | ಪಿಡಬ್ಲೂ - 3 |
| ತಂದೆಯ ಹೆಸರು | - | ಪದ್ಮೇಗೌಡ | ಸಿಡಬ್ಲೂ - 3 |
| ವಯಸ್ಸು | - | 45 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಹಳೆಕೆರೆ ಗ್ರಾಮ, ಮೂಡಿಗೆರೆ ತಾಲ್ಲೂಕು | |

ದಿನಾಂಕಃ 17-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ಮೃತ 2 ನೇ ಆರೋಪಿಯ ಪರಿಚಯ ಕೂಡ ಇರುತ್ತದೆ. ಈ ದಿನ 1 ನೇ ಆರೋಪಿ ಗೈರು ಹಾಜರಾಗಿದ್ದು (1 ನೇ ಆರೋಪಿತನ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅದರಲ್ಲಿ ಆತನ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ತಿಳಿಸಿರುತ್ತಾರೆ.) ಆತನ ಪರಿಚಯ ಇರುತ್ತದೆ. ಪ್ರಾಸಾ.1 ರಘು ನನಗೆ ಅಣ್ಣನಾಗಬೇಕು.

2. ದಿಃ 23.02.2013 ರಂದು ಕಂದಾಯ ಅಧಿಕಾರಿಗಳು ನಮ್ಮ ಗ್ರಾಮಕ್ಕೆ ಬಂದಿದ್ದು ಸ್ಮಶಾನ ಜಾಗದಲ್ಲಿ ಬೆಳೆದಿದ್ದ ಕಾಫಿ ಬೆಳೆಗಳ ಕಟಾವಿಗೆ ಬಂದಿದ್ದರು. ಸದರಿ ಜಾಗದ ಸರ್ವೆ ನಂಬರ್ 47 ಆಗಿದ್ದು ಅದು ಸ್ಮಶಾನಕ್ಕಾಗಿ ಮಿಸಲಾಗಿತ್ತು. ಆ ಸಂದರ್ಭದಲ್ಲಿ ತಹಶೀಲ್ದಾರರು ಮತ್ತು

ಗ್ರಾಮ ಲೆಕ್ಕಾಧಿಕಾರಿ ಬಂದಿದ್ದರು. ಆ ಸಂದರ್ಭದಲ್ಲಿ ನಾನು ಮತ್ತು ನನ್ನ ಜೊತೆ ರಘು, ಪೂರ್ಣೇಶ, ಸತೀಶ, ರಾಕೇಶ, ರಜನಿಕಾಂತ ಇವರು ಸಹ ಬಂದಿದ್ದರು. ಆ ಸಮಯದಲ್ಲಿ ಸದರಿ ಜಾಗದಲ್ಲಿ ಬೆಳೆದಿದ್ದ ಕಾಫಿ ಬೆಳೆಗಳನ್ನು ಕುಯಿಲು ಮಾಡುತ್ತಿದ್ದರು. ಅಷ್ಟೊತ್ತಿಗೆ ಬೆಳಿಗ್ಗೆ ಸುಮಾರು 11 ಗಂಟೆಗೆ 1 ನೇ ಆರೋಪಿ ಪ್ರಸನ್ನ ನ್ನು ತನ್ನ ವಾಹನದಲ್ಲಿ ಬಂದು ನನ್ನ ಅಣ್ಣನನ್ನು ಕುರಿತು ನೀವೇಕೆ ಇಲ್ಲಿ ಬಂದಿದ್ದೀರಿ, ಸೂಳೆ ಮಗನೇ, ಬೋಳಿ ಮಗನೇ ಎಂದು ಬೈದರು. ನಂತರ 1 ನೇ ಆರೋಪಿ ಪ್ರಸನ್ನನು ಉಳಿದ ಆರೋಪಿಗಳಿಗೆ ನನ್ನ ಅಣ್ಣನಾದ ರಘು ನನ್ನು ಕೊಲೆ ಮಾಡಬೇಕು ಕತ್ತಿಯನ್ನು ತೆಗೆದುಕೊಂಡು ಬಾ ಎಂದು ಹೇಳಿದಾಗ 4 ನೇ ಆರೋಪಿ ತಮ್ಮ ಮನೆಯಿಂದ ಕತ್ತಿಗಳನ್ನು ತೆಗೆದುಕೊಂಡು ಬಂದರು. ಆ ಸಂದರ್ಭದಲ್ಲಿ 1 ನೇ ಆರೋಪಿ ಪ್ರಸನ್ನನು ಒಂದು ಕತ್ತಿಯನ್ನು ಕಸಿದುಕೊಂಡು ನಮ್ಮ ಅಣ್ಣ ಫ್ರಾಸಾ.1 ರವರ ಮೇಲೆ 1 ನೇ ಆರೋಪಿಯು ಕತ್ತಿಯಿಂದ ಕುತ್ತಿಗೆಗೆ ಕಡಿಯಲು ಹೋದಾಗ ನನ್ನ ಅಣ್ಣ ತನ್ನ ಕೈಯನ್ನು ಅಡ್ಡ ಮಾಡಿದಾಗ ಆತನ ಹೆಬ್ಬೆರಳು ಮತ್ತು ಮಧ್ಯೆಬರಳಿಗೆ ಪೆಟ್ಟಾಯಿತು. ಅಲ್ಲದೇ ನನ್ನ ತಮ್ಮ ಪೂರ್ಣೇಶ್ ಗೂ ಸಹ ಆರೋಪಿಗಳು ದೊಣ್ಣೆಯಿಂದ ಆತನ ಮೊಣಕೈಗೆ ಮತ್ತು ಕಲ್ಲಿನಿಂದ ಆತನ ಕಾಲಿನ ಪಾದಕ್ಕೆ ಹೊಡೆದಿರುತ್ತಾನೆ. ನಂತರ 1 ನೇ ಆರೋಪಿಯು ತನ್ನ ಕಾರನ್ನು ನಮ್ಮ ಮೇಲೆ ಹತ್ತಿಸುವ ಸಲುವಾಗಿ 2-3 ಸಲ ಹಿಂದಕ್ಕೆ ಮುಂದಕ್ಕೆ ಮಾಡಿದನು. ನಂತರ ನಾನು ಮತ್ತು ಇತರರೊಂದಿಗೆ ನನ್ನ ಅಣ್ಣ ಮತ್ತು ತಮ್ಮನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಈ ಕುರಿತಂತೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

3. ಆರೋಪಿಗಳು ಫ್ರಾಸಾ.1 ರಘು, ಫ್ರಾಸಾ.2 ಪೂರ್ಣೇಶ್ ರವರ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ವಸ್ತುಗಳನ್ನು ನೋಡಿದರೆ

ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನುನ ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ.

4. ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಾದ 3 ನೇ ಆರೋಪಿಗಳೇ ನನ್ನ ಅಣ್ಣನ ಮತ್ತು ತಮ್ಮನ ಮೇಲೆ ಆ ದಿನ ಹಲ್ಲೆ ಮಾಡಿದವರಾಗಿರುತ್ತಾರೆ.

<u>ಪಾಟೀ ಸವಾಲು ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದ – 1, 3 ಮತ್ತು 4 ನೇ ಆರೋಪಿತರ ಪರವಾಗಿ</u>

5. ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮದ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾ

ದಿನಾಂಕಃ 17-01-2019 ರಂದು ಮಧ್ಯಾಹ್ನ 3 ಗಂಟೆಗೆ ಪುನಃ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದ – 1, 3 ಮತ್ತು 4 ನೇ ಆರೋಪಿತರ ಪರವಾಗಿ

6. ನನಗೆ ಮೇಲೆ 1 ನೇ ಆರೋಪಿಯವರು 2000 ಇಸವಿಯಲ್ಲಿ ಹಣ ವಸೂಲಾತಿ ಪ್ರಕರಣವನ್ನು ಮೂಡಿಗೆರೆ ನ್ಯಾಯಾಲಯದಲ್ಲಿ ದಾಖಲಿಸಿದ್ದರು ಎಂದರೆ ಸರಿ. ಅದರ ವಿರುದ್ಧ ನಾನು ಮೇಲಿನ ನ್ಯಾಯಾಲಯದಲ್ಲಿ ಅಫೀಲು ಹಾಕಿದ್ದು ಅದು ವಜಾಗೊಂಡಿರುತ್ತದೆ ಎಂದರೆ ಸರಿ.

7. ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಬರುವ ಕುರಿತು ನನಗೆ ನೋಟೀಸು ನೀಡಿರಲಿಲ್ಲ. ನಾನು ಮಡಿವಾಳ ಜನಾಂಗದವರು ನನ್ನನ್ನು ಕರೆದಿದ್ದರಿಂದ ಸದರಿ ಸ್ಥಳಕ್ಕೆ ಹೋಗಿರುತ್ತೇನೆ. ಆ ದಿನ ಘಟನೆ ನಡೆದ ಸ್ಥಳದಲ್ಲಿ ಸುಮಾರು 10-15 ಜನ ಸೇರಿದ್ದೆವು. ನನಗೆ ಸರ್ವೆ ನಂಬರ್ 47 ರಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿ. ಆದರೆ ಸದರಿ ಸರ್ವೆ ನಂಬರ್ 47 ರಲ್ಲಿ ನನಗೆ ಒಂದು ಮನೆ ಇರುತ್ತದೆ. ಸ್ಮಶಾನಕ್ಕೆ ಎಂದು ಮೀಸಲಿಟ್ಟ ಜಾಗವು ಸುಮಾರು 20 ಗುಂಟೆ ಇರುತ್ತದೆ. ಮೃತ 2 ನೇ ಆರೋಪಿಗೆ ಸರ್ಕಾರದಿಂದ ಸರ್ವೆ ನಂಬರ್ 47 ರಲ್ಲಿ ಜಮೀನು ಮಂಜೂರಾಗಿದ್ದು ಮತ್ತು ಅದರಲ್ಲಿ ಅವರು ಕಾಫಿ ಬೆಳೆದ ಬಗ್ಗೆ ನನಗೆ ಗೊತ್ತಿಲ್ಲ. ಮೃತ 2 ನೇ ಆರೋಪಿಯು ತೀರಿ ಹೋದ ನಂತರ 3 ಮತ್ತು 4 ನೇ ಆರೋಪಿಯವರು ಸರ್ವೆ ನಂಬರ್ 47 ರಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. 3 ಮತ್ತು 4 ನೇ ಆರೋಪಿಗಳು ತಾವು ಸ್ವಾಧೀನದಲ್ಲಿ ಇರುವ ಜಾಗಕ್ಕೆ ಬೇಲಿ ಹಾಕಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸರ್ವೆ

ನಂಬರ್ 47 ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಮತ್ತು ಕಂದಾಯ ಅಧಿಕಾರಿಗಳ ಕಚೇರಿಯಲ್ಲಿ ಪ್ರಕರಣಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ.

8. ಸದರಿ ಆರೋಪಿಗಳು ನಮಗೆ ಅವಚ್ಯಾಶಬ್ಧಗಳಿಂದ ಬೈದಿದ್ದು ಮತ್ತು 1 ನೇ ಆರೋಪಿಯು ನಮ್ಮನ್ನು ಕೊಲೆ ಮಾಡಲು ಮೃತ 2 ನೇ ಆರೋಪಿಗೆ ಕತ್ತಿಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದ್ದು ಸುಳ್ಳು ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿ ಮತ್ತು ಪೊಲೀಸರು ಘಟನೆ ಯಾಗುವ ಸ್ಥಳದಲ್ಲಿ ಇದ್ದು ನಂತರ ಹೋದರು. ಘಟನೆ ನಡೆದ ದಿನ 1 ನೇ ಆರೋಪಿಯು ತನ್ನ ವಾಹನದಲ್ಲಿ ಮನೆಗೆ ಹೋಗುವಾಗ ನಾವು ಅಣ್ಣತಮ್ಮಂದಿರು ಮತ್ತು ಇತರರು ಸೇರಿ ಅವರ ಕಾರನ್ನು ಅಡ್ಡಗಟ್ಟಿ ಹಲ್ಲೆ ಮಾಡಿದೆವು ಎಂದರೆ ಸರಿಯಲ್ಲ. ಮು.ಮಾ.1 ರಿಂದ 4 ಇವುಗಳನ್ನು ಘಟನೆ ನಡೆದ ದಿನ ಮತ್ತು ಸ್ಥಳದಲ್ಲಿ ನೋಡಿದ್ದು ಬಿಟ್ಟರೆ ಈ ದಿನವೇ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಮು.ಮಾ.1 ಮತ್ತು 2 ರ ಮೇಲೆ ಆಗ ರಕ್ತದ ಕಲೆ ಇತ್ತು ಅದರ ಹೊರತಾಗಿ ಬೇರೆ ಗುರುತು ಇರಲಿಲ್ಲ. ಈ ದಿನ ನಾನು ನೋಡಿದ ಮು.ಮಾ.1 ಮತ್ತು 2 ರಲ್ಲಿ ರಕ್ತದ ಕಲೆ ಇರುವ ಬಗ್ಗೆ ಗೊತ್ತಿಲ್ಲ. ಘಟನೆ ನಡೆದ ದಿನ ನನ್ನ ಅಣ್ಣ ಪ್ರಾಸಾ.1 ಯಾವ ಬಣ್ಣದ ಶರ್ಟು ನ್ನು ಹಾಕಿಕೊಂಡಿದ್ದಿರು ಎಂದು ಹೇಳಲು ಆಗುವುದಿಲ್ಲ. ಆದರೆ ಚಕ್ಸ್ ಶರ್ಟು ನ್ನು ಹಾಕಿದ್ದರು.

9. ಘಟನೆ ನಡೆದ ದಿನ 1 ನೇ ಆರೋಪಿಯು ಕತ್ತಿಯಿಂದ ನನ್ನ ಅಣ್ಣ ಪ್ರಾಸಾ.1 ರವರ ಕುತ್ತಿಗೆಗೆ ಹಲ್ಲೆ ಮಾಡಲು ಬಂದಾಗ ನನ್ನ ಅಣ್ಣ ತನ್ನ ಕೈಯನ್ನು ಅಡ್ಡ ಹಿಡಿದಾಗ ಸದರಿ ಹಲ್ಲೆಯಿಂದ ಆತನ ಕೈ ಬೆರಳುಗಳಿಗೆ ರಕ್ತಗಾಯವಾಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಕಾರನ್ನು 2-3 ಸಲ ಹಿಂದೆ ಮುಂದೆ ಚಲನೆ ಮಾಡಿದಾಗ ಹಿಂಭಾಗದ ಗ್ಲಾಸು ಗೆರೆಗೆ ತಾಗಿ ವಡೆದು

ಹೋಗಿದ್ದು ಸುಳ್ಳು ನಾವು ಅದನ್ನು ವಡೆದು ಹಾಕಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿನ ಯಾವುದೇ ಘಟನೆ ನಡೆದಿಲ್ಲ. ನನ್ನ ಅಣ್ಣ ಫ್ರಾಸಾ.1 ರಘು ಇವರು ಹೇಳಿಕೊಟ್ಟಂತೆ ನ್ಯಾಯಾಲಯದ ಮುಂದೆ ಆರೋಪಿಗಳ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ತೋರಿಸಿದ ಮು.ಮಾ.1 ಮತ್ತು 2 ಗಳು ಸಮಾನ್ಯವಾಗಿ ಕಾಫಿ ಬೆಳೆಯುವ ರೈತರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ಈ ಘಟನೆಗೆ ಸಂಬಂಧಿಸಿದಂತೆ ನಾನು ಇನ್ನೊಂದು ಕೇಸಿನಲ್ಲಿ ನಾನು ಆರೋಪಿಯಾಗಿದ್ದೇನೆ ಎಂದರೆ ಸರಿ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾ